ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 2, Sep-Oct 2019, 58-65**
**©*IIMRD*, Mysuru**

IIMRD JOURNALS
**www.iimrd.com**

# ಬುಡಕಟ್ಟು ಅಭಿವೃದ್ಧಿಯಲ್ಲಿ ಸಿಸಿಡಿ ಯೋಜನೆಯ ಪಾತ್ರ : ಒಂದು ವಿಶ್ಲೇಷಣೆ

**ಮಧುಸೂದನ ಎ.ಪಿ.[1] ಮತ್ತು ಡಾ.ಬಿ.ಆರ್.ವಿಜಯೇಂದ್ರ[2]**

**ಪೀಠಿಕೆ**

ಭಾರತ ದೇಶವು ವಿವಿಧ ಭಾಷೆ, ವಿವಿಧ ಧರ್ಮ, ವಿವಿಧ ಸಂಸ್ಕೃತಿ, ವಿವಿಧ ಧಾರ್ಮಿಕ ಆಚರಣೆಯನ್ನು ಹೊಂದಿರುವಂತಹ ಬಹುಸಂಸ್ಕೃತಿಯ ಬಹುಭಾಷೆಯ ರಾಷ್ಟ್ರವಾಗಿದೆ. ಹೀಗಿದ್ದರೂ ಕೂಡ ವಿವಿಧತೆಯಲ್ಲಿ ಏಕತೆ ಎಂಬ ಧ್ಯೇಯದೊಂದಿಗೆ ಎಲ್ಲಾ ಜನಾಂಗ, ಧರ್ಮ ಸಂಸ್ಕೃತಿಯ ಜನ ಸಮುದಾಯವನ್ನು ಹೊಂದಿರುವ ವಿಶ್ವದ ಅಭಿವೃದ್ಧಿಶೀಲ ರಾಷ್ಟ್ರವಾಗಿ ಬೆಳೆಯುತ್ತಿದೆ.

ಬೃಹತ್ ಬಹುಸಂಸ್ಕೃತಿಯ ರಾಷ್ಟ್ರವಾದ ಭಾರತದಲ್ಲಿ ಅರಣ್ಯದಲ್ಲಿಯೇ ಹುಟ್ಟಿ, ಅರಣ್ಯದಲ್ಲಿಯೇ ಬೆಳದು, ಅರಣ್ಯದಲ್ಲಿಯೇ ತಮ್ಮ ಜೀವನವನ್ನು ಕಟ್ಟಿಕೊಂಡು, ಅರಣ್ಯದಲ್ಲಿಯೇ ಬಾಳಿ ಬದುಕುತ್ತಿರುವ ಅನೇಕ ಬುಡಕಟ್ಟು ಸಮುದಾಯಗಳು ಕಂಡು ಬರುತ್ತವೆ. ಬುಡಕಟ್ಟು ಸಮುದಾಯಗಳು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗದೆ ಮತ್ತು ತಮ್ಮ ಮೂಲ ನೆಲೆಯಿಂದ ಹೊರಬಂದು ಹೊಸ ಜೀವನಪದ್ದತಿಯನ್ನು ಅಳವಡಿಸಿಕೊಳ್ಳಲು ಸಾಧ್ಯವಾಗದೇ ಇರುವುದರಿಂದ ಇವರ ಆರ್ಥಿಕ, ಸಾಮಾಜಿಕ ಜೀವನ ಇಂದಿಗೂ ತೀರಾ ಶೋಚನೀಯ ಸ್ಥಿತಿಯಲ್ಲಿದೆ.

ಭಾರತದಲ್ಲಿ ಪ್ರಸ್ತುತ 700ಕ್ಕೂ ಅಧಿಕ ಸಮುದಾಯಗಳನ್ನು ಪರಿಶಿಷ್ಟ ಬುಡಕಟ್ಟು ಸಮುದಾಯದ ಪಟ್ಟಿಗೆ ಸೇರಿಸಿದ್ದು, ಇವುಗಳಲ್ಲಿ 75 ಬುಡಕಟ್ಟು ಸಮುದಾಯಗಳನ್ನು ಮೂಲನಿವಾಸಿ ಬುಡಕಟ್ಟುಗಳು ಎಂದು ಗುರುತಿಸಲಾಗಿದೆ. ಅಂದರೆ ಇತರೆ ಬುಡಕಟ್ಟು ಸಮುದಾಯಗಳಿಗೆ ಹೋಲಿಸಿದರೆ ಇವರ ಜನಸಂಖ್ಯೆ ಕ್ಷೀಣಿಸುತ್ತಿದೆ ಅಥವಾ ಜನಸಂಖ್ಯೆ ಏರಿಕೆ ನಿಧಾನಗತಿಯಲ್ಲಿದೆ. ಅಲ್ಲದೆ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಬುಡಕಟ್ಟು ಸಮುದಾಯಗಳಾಗಿವೆ. ಕರ್ನಾಟಕ ರಾಜ್ಯದಲ್ಲಿ ಜೇನುಕುರುಬ ಮತ್ತು ಕೊರಗ ಬುಡಕಟ್ಟು ಸಮುದಾಯಗಳನ್ನು ಈ ಗುಂಪಿಗೆ ಸೇರಿಸಲಾಗಿದೆ.

ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಇತ್ತೀಚಿಗೆ ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಅವುಗಳಲ್ಲಿ ಸಿಸಿಡಿ ಯೋಜನೆ ಅತ್ಯಂತ ಪ್ರಮುಖವಾದುದಾಗಿದೆ. ಈ ಯೋಜನೆಯ ಮೂಲ ಉದ್ದೇಶ ಅವರ ಅಭಿವೃದ್ಧಿಯ ಜೊತೆಗೆ ಸಂರಕ್ಷಣೆ ಮಾಡುವುದಾಗಿದೆ. ಈ ಮೂಲಕ ಮೂಲ ಬುಡಕಟ್ಟು ಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸುತ್ತಿದೆ.

*[1] ಸಂಶೋಧನಾ ವಿದ್ಯಾರ್ಥಿ, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.*
*[2] ಸಹಾಯಕ ಮಾನವಶಾಸ್ತ್ರಜ್ಞರು, ಆಂಥ್ರೋಪಾಲಾಜಿಕಲ್ ಸರ್ವೇ ಆಫ್ ಇಂಡಿಯಾ, ಸೌತ್‌ಜೋನ್, ಮೈಸೂರು.*

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಜೇನುಕುರುಬರು ನೆಲೆಸಿರುವ ಬುಡಕಟ್ಟು ಹಾಡಿಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಈ ಅಧ್ಯಯನದಲ್ಲಿ ಸಿಸಿಡಿ ಯೋಜನೆಯ ಉದ್ದೇಶ ಸಿಸಿಡಿ ಯೋಜನೆ ಅನುಷ್ಠಾನದಲ್ಲಿನ ಸಾಧಕ–ಭಾಧಕ ಅಂಶಗಳು ಮತ್ತು ಸಿಸಿಡಿ ಯೋಜನೆಯು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯಲ್ಲಿ ಯಾವ ರೀತಿ ಪಾತ್ರವಹಿಸುತ್ತದೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಸಾಮಾನ್ಯವಾಗಿ ಸಿಸಿಡಿ ಯೋಜನೆಯನ್ನು ಅನುಷ್ಠಾನಗೊಳಿಸುವ ಮುನ್ನ ಕೆಳಹಂತದ ಸಮೀಕ್ಷೆಯ ಮೂಲ ಯಾವ ಯೋಜನೆಯನ್ನು ರೂಪಿಸಿಸುವುದು  ಸೂಕ್ತ ಎಂದು ರಾಜ್ಯ ಸರ್ಕಾರವು ಅಧ್ಯಯನ ಮಾಡಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸೇರಿ ಯೋಜನೆಯನ್ನು ಅಂತಿಮವಾಗಿ ಆಯ್ಕೆ ಮಾಡಿಕೊಂಡು ಅದನ್ನು ಅನುಷ್ಠಾನಗೊಳಿಸಲು ಪ್ರಾರಂಭ ಮಾಡುತ್ತದೆ. ಸಿಸಿಡಿ ಯೋಜನೆಯನ್ನು ಅನುಮೋದಿಸಲು ಕೇಂದ್ರ ಸರ್ಕಾರದ ಹಂತದಲ್ಲಿ ಒಂದು ತಜ್ಞರ ಸಮಿತಿಯನ್ನು ರೂಪಿಸಿದ್ದು. ಈ ಸಮಿತಿಯಲ್ಲಿ ಕೇಂದ್ರ ಬುಡಕಟ್ಟು ಸಚಿವಾಲಯದ ಕಾರ್ಯದರ್ಶಿಗಳು ಅಧ್ಯಕ್ಷರಾಗಿದ್ದು, ಜಂಟಿ ಕಾರ್ಯದರ್ಶಿಗಳು ಸಹ ಅಧ್ಯಕ್ಷರಾಗಿರುತ್ತಾರೆ ಇವರೊಂದಿಗೆ ಇತರ ಆರು ಜನ ಸದಸ್ಯರುಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ ನೀತಿ ಆಯೋಗದ ಸಲಹೆಗಾರರು, ರಾಷ್ಟ್ರಿಯ ಬುಡಕಟ್ಟು ಆಯೋಗದ ನಿರ್ದೇಶಕರು, ಭಾರತೀಯ ಮಾನವ ಸರ್ವೇಕ್ಷಣಾಲಯ ತಜ್ಞರು,  ಬುಡಕಟ್ಟು ಮಂತ್ರಾಲಯದ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ನಿರ್ದೇಶಕರು ಹಾಗೂ ಸ್ವಯಂ ಸೇವಾ ಸಂಸ್ಥೆಯ ನಿರ್ದೇಶಕರನ್ನು ಸಮಿತಿ ಒಳಗೊಂಡಿರುತ್ತದೆ.

ಈ ಎಲ್ಲಾ ತಜ್ಞರು ಕೂಲಂಕಷವಾಗಿ ಚರ್ಚಿಸಿ ಯಾವ ಯೋಜನೆಯ ಅನುಷ್ಠಾನದಿಂದ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಸಾಧ್ಯತೆಯಿದೆ ಎಂದು  ತಿರ್ಮಾನಿಸಿ ಅನುಮೋದನೆಯನ್ನು ನೀಡಿದ ನಂತರ ರಾಜ್ಯ ಸರ್ಕಾರಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ನಂತರ ರಾಜ್ಯ ಸರ್ಕಾರವು ಈ ಯೋಜನೆಗಳ ಅನುಷ್ಠಾನಗೊಳಿಸಲು ಒಂದು ಕ್ರೀಯಾ ಯೋಜನೆಯನ್ನು ರೂಪಿಸಿ ಯಾವ–ಯಾವ ಹಂತದಲ್ಲಿ  ಯಾವ ಕ್ಷೇತ್ರದಲ್ಲಿ  ಯಾವ–ಯಾವ ಕಾರ್ಯಗಳು ನಡೆಯಬೇಕು ಮತ್ತು ಯಾವ ಕಾಲದೊಳಗೆ ಈ ಕಾರ್ಯಗಳು ನಡೆಯಬೇಕು, ಕಾರ್ಯಕ್ರಮದ ಅನುಷ್ಠಾನದಲ್ಲಿ ಇತರ ಯಾವ ಸಂಸ್ಥೆಗಳು ಒಳಗೊಳ್ಳಬೇಕು ಎಂಬುದನ್ನು ನಿರ್ಧರಿಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುತ್ತದೆ. ನಂತರ ಈ ಕ್ರಿಯಾ ಯೋಜನೆಯ ಅನುಮೊದನೆ ದೊರೆತ ಯೋಜನೆಯನ್ನು ಅನುಷ್ಠಾನಗೊಳಿಸಲು ಅವಕಾಶವಿರುತ್ತದೆ.

ಸಿಸಿಡಿ ಯೋಜನೆಯು ಶೇ.100 ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಯಾಗಿದ್ದು ರಾಜ್ಯ ಸರ್ಕಾರವು ನೀಡಿರುವ ಕ್ರಿಯಾ ಯೋಜನೆಯಲ್ಲಿ ತಿಳಿಸಿರುವ ವಾರ್ಷಿಕ ವ್ಯಯಕ್ಕೆ ತಕ್ಕಂತೆ ಹಂತ ಹಂತವಾಗಿ ಕೇಂದ್ರ ಸರ್ಕಾರವು ಹಣವನ್ನು ಬಿಡುಗಡೆ ಮಾಡುತ್ತದೆ.

ಸಿಸಿಡಿ ಯೋಜನೆಯ ಅನುಷ್ಠಾನದ ಮೇಲುಸ್ತುವಾರಿಯನ್ನು ಕೇಂದ್ರ ಸರ್ಕಾರವು ಬುಡಕಟ್ಟು ಮಂತ್ರಾಲಯದಿಂದ ಅಥವಾ ಯಾವುದಾದರು ಖಾಸಗಿ ಸಂಸ್ಥೆಯ ಮುಖಾಂತರ ಇದರ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುತ್ತದೆ. ರಾಜ್ಯ ಸರ್ಕಾರವು ಪ್ರತಿ ವರ್ಷದ ಕೊನೆಯಲ್ಲಿ ವಾರ್ಷಿಕ

ವರದಿಯ ರೂಪದಲ್ಲಿ ಸಿಸಿಡಿ ಯೋಜನೆಯ ಕಾರ್ಯಕ್ರಮಗಳ ಕುರಿತು ಕೇಂದ್ರ ಸರ್ಕಾರಕ್ಕೆ ವರದಿ ನೀಡುತ್ತದೆ.

ಬುಡಕಟ್ಟು ಸಮುದಾಯಗಳು ಅರಣ್ಯದಲ್ಲಿ ಅಥವಾ ಅರಣ್ಯದ ಅಂಚಿನಲ್ಲಿ ತಮ್ಮ ಜೀವನವನ್ನು ಕಟ್ಟಿಕೊಂಡು ಅರಣ್ಯದಲ್ಲಿ ದೊರೆಯುವ ಸೊಪ್ಪು, ಹಣ್ಣುಗಳು, ಗೆಡ್ಡಗೆಣಸು ಮುಂತಾದವುಗಳೊಂದಿಗೆ ಇವರ ಆಹಾರ ಸಂಸ್ಕೃತಿಯು ಬೆರತು ಹೋಗಿದೆ. ಹಾಗಾಗಿ ಅರಣ್ಯಕಾಯ್ದೆಯ ಮುಖಾಂತರ ಇವರನ್ನು ಅರಣ್ಯದಿಂದ ಹೊರಗೆ ಸ್ಥಳಾಂತರರಿಸಿದರೂ ಕೂಡ ಇವರು ಅರಣ್ಯದೊಂದಿಗೆ ತಮ್ಮದೇ ಅದಂತಹ ಅವಿನಾಭಾವ ಸಂಬಂಧವನ್ನು ಹೊಂದಿದ್ದಾರೆ, ಆದುದರಿಂದ ಅರಣ್ಯ ಸಂರಕ್ಷಣೆಯೊಂದಿಗೆ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯನ್ನು ಮಾಡಬೇಕು ಎಂಬ ಸದುದ್ದೇಶದೊಂದಿಗೆ ಕೇಂದ್ರ ಸರ್ಕಾರ ಬುಡಕಟ್ಟು ಮಂತ್ರಾಲಯವು ಸಿಸಿಡಿ ಯೋಜನೆಯನ್ನು ಜಾರಿಗೆ ತಂದಿದೆ.

ಈ ಯೋಜನೆ ಮುಖಾಂತರ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಜೀವನಪದ್ಧತಿಯನ್ನು ಉತ್ತಮೀಕರಿಸುವ ಸಲುವಾಗಿ ಉದ್ಯೋಗವಕಾಶ ಸೃಷ್ಟಿ, ಆರ್ಥಿಕ ಅಭಿವೃದ್ಧಿ, ಆರೋಗ್ಯ ಸ್ಥಿತಿಗತಿಯಲ್ಲಿ ಅಭಿವೃದ್ಧಿ, ಶಿಕ್ಷಣ ಮಟ್ಟದಲ್ಲಿ ಅಭಿವೃದ್ಧಿ, ವಸತಿ ಮತ್ತು ವಾಸಸ್ಥಾನದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿದೆ.

**ಅಧ್ಯಯನದ ಉದ್ದೇಶ**

- ಸಿಸಿಡಿ ಯೋಜನೆಯ ಅನುಷ್ಠಾನದ ಸಾಧಕ–ಬಾಧಕಗಳನ್ನು ಅಧ್ಯಯನ ಮಾಡುವುದು.
- ಸಿಸಿಡಿ ಯೋಜನೆಯಿಂದ ಬುಡಕಟ್ಟು ಸಮುದಾಯಗಳಲ್ಲಿ ಜೀವನಮಟ್ಟ ಸುಧಾರಣೆಯಾಗುತ್ತಿದೆಯೇ ಎಂಬುದನ್ನು ವಿಶ್ಲೇಷಿಸುವುದು.

**ಸಂಶೋಧನಾ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದ್ದು, ಸಂದರ್ಶನ ವಿಧಾನ, ಪ್ರಕರಣ ಅಧ್ಯಯನ ವಿಧಾನವನ್ನು ಪ್ರಮುಖವಾಗಿ ಬಳಸಿಕೊಳ್ಳಲಾಗಿದ್ದು, ಸಂದರ್ಶನ ಕೈಪಿಡಿ, ಗುಂಪು ಚರ್ಚೆ ಮುಂತಾದ ತಂತ್ರಗಳನ್ನು ಮಾಹಿತಿ ಸಂಗ್ರಹಣೆಗೆ ಬಳಸಿಕೊಳ್ಳಲಾಗಿದೆ.

**ಮಾದರಿ ವಿಧಾನ**

ಅಧ್ಯಯನಕ್ಕಾಗಿ ಕಾರೇಮಾಳ ಮತ್ತು ಆಡಿನಕಣಿವೆ ಎಂಬ ಎರಡು ಹಾಡಿಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಆಡಿನಕಣಿವೆ ಎಂಬ ಹಾಡಿಯಲ್ಲಿ ಸಂಪೂರ್ಣವಾಗಿ ಜೇನುಕುರುಬ ಬುಡಕಟ್ಟು ಸಮುದಾಯ ಮಾತ್ರ ಇದೆ. ಕಾರೇಮಾಳ ಹಾಡಿಯಲ್ಲಿ ಸೋಲಿಗ, ಬೆಟ್ಟಕುರುಬ ಮತ್ತು ಜೇನುಕುರುಬ ಬುಡಕಟ್ಟು ಸಮುದಾಯಗಳು ಕಂಡುಬರುತ್ತದೆ. ಎರಡು ಹಾಡಿಗಳಿಂದ ಜೇನುಕುರುಬ ಸಮುದಾಯದ ತಲಾ 12 ಕುಟುಂಬಗಳನ್ನು ಅಂದರೆ ಒಟ್ಟು 24 ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಎರಡು ಹಾಡಿಗಳಲ್ಲಿ ಸಿಸಿಡಿ ಯೋಜನೆಯಿಂದ ವೈಯಕ್ತಿಕವಾಗಿ ಕುರಿ ಮತ್ತು ವಸತಿಯನ್ನು ನೀಡಲಾಗಿದೆ.

ಸಿಸಿಡಿ ಯೋಜನೆಯ ಮುಖಾಂತರ ಕುರಿಗಳು ಮತ್ತು ಮನೆಗಳನ್ನು ಪಡೆದಿರುವ ಫಲಾನುಭವಿಗಳ ಜೀವನದಲ್ಲಾಗಿರುವ ಬದಲಾವಣೆಯನ್ನು ಕುರಿತು ಚರ್ಚಿಸಲಾಗಿದೆ.

2013–2014 ನೇ ಸಾಲಿನಲ್ಲಿ ಕಾರೇಮಾಳದಲ್ಲಿ 6 ಕುಟುಂಬಗಳಿಗೆ ಕುರಿಮರಿಗಳನ್ನು ನೀಡಲಾಗಿದ್ದು 4 ಕುಟುಂಬಗಳಿಗೆ ಮನೆಯನ್ನು ನಿರ್ಮಿಸಿಕೊಡಲಾಗಿದೆ. ಆಡಿನಕಣಿವೆಯಲ್ಲಿ ಹಾಗೆಯೇ 2017–2018 ಮತ್ತು 2014–2015 ಸಾಲಿನಲ್ಲಿ 15 ವಸತಿ ಮನೆಗಳನ್ನು ನೀಡಲಾಗಿದೆ. ಆಡಿನ ಕಣಿವೆಯಲ್ಲಿ 2014–2015ನೇ ಸಾಲಿನಲ್ಲಿ ಬ್ಲಾಕ್ 2 ರಲ್ಲಿ ಉತ್ತರ–ದಕ್ಷಿಣಕ್ಕೆ ಮನೆಬಾಗಿಲು ಇದೆ. ಇವರ ಮನೆಯ ಅಗಲ 20 ಅಡಿಯಿದ್ದು ಉದ್ದ 15 ಅಡಿಯಿದೆ. ಮದ್ಯದಲ್ಲಿ ಒಂದು ಕಬ್ಬಿಣದ ಬಾಗಿಲು ಇದೆ. ಬಾಗಿಲಿನ ಪಕ್ಕದಲ್ಲಿ ಒಂದು 4*4 ಅಡಿ ಅಳತೆಯ ತಗಡಿನ ಕಿಟಕಿಯಿದೆ. ಮನೆಯ ತಳಪಾಳ ಎರಡುವರೆ ಅಡಿಯಿಂದ ಮೂರು ಅಡಿ ಎತ್ತರದಲ್ಲಿದೆ. ಮನೆಯ ಮೇಲ್ಛಾವಣಿಯು ತಗಡಿನ ಶೀಟನ್ನು ಹಾಕಲಾಗಿದ್ದು ತೀರಾ ಕಳಪೆ ಮತ್ತು ತೇಳುವಾಗಿದ್ದು ಜೋರು ಗಾಳಿ, ಮಳೆ ಬಂದರೆ ಭಾರಿ ಶಬ್ಧ ಬರುತ್ತದೆ.

ಆಡಿನ ಕಣಿವೆ ಮನೆಯನ್ನು ಪಡೆದಿರುವ 15 ಫಲಾನುಭವಿಗಳಲ್ಲಿ 10 ಫಲಾನುಭವಿಗಳು ಮಾತ್ರ ವಾಸವಾಗಿದ್ದು 5 ಫಲಾನಿಭವಿಗಳು ಮನೆಯಲ್ಲಿ ವಾಸ ಮಾಡದೆ ಮನೆಯನ್ನು ಹಾಗೆಯೇ ಖಾಲಿ ಬಿಟ್ಟಿರುತ್ತಾರೆ. ಇವರನ್ನು ಇದರ ಕುರಿತು ವಿಚಾರಿಸಿದಾಗ ಹೊಸದಾಗಿ ನೀಡಿರುವ ಮನೆಯ ಗೋಡೆಯು ಬಿರುಕು ಬಿಟ್ಟಿದ್ದು, ಅದರ ಗಾರೆಯ ಮಲಗಿರುವಾಗ ತಮ್ಮ ಮೇಲೆಯೇ ಬೀಳುತ್ತದೆ ಹಾಗೂ ಮೇಲೆ ಹಾಕಿರುವ ಛಾವಣಿಯು ತೀರಾ ತೆಳುವಾಗಿದ್ದು. ಮಳೆಗಾಲದಲ್ಲಿ ಗಾಳಿಗೆ ಕಿತ್ತು ಬರುವ ಸಾಧ್ಯತೆಯಿದ್ದು ನಮಗೆ ವಾಸಿಸಲು ಭಯವಾಗುತ್ತದೆ. ಕಾಡುಪ್ರದೇಶವಾದ ಇಲ್ಲಿ ಗಾಳಿ ಮತ್ತು ಮಳೆ ಅಧಿಕವಾಗಿರುವುರಿಂದ ಮಳೆಯ ಹನಿಗಳು ಛಾವಣಿಯ ಮೇಲೆ ಬಿದ್ದಾಗ ಹೆಚ್ಚಿನ ಶಬ್ಧ ಉಂಟು ಮಾಡುತ್ತದೆ. ಇದರಿಂದ ನೆಮ್ಮದಿಯಾಗಿ ನಿದ್ರೆ ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಗೋಡೆಯು ಬಿರುಕು ಬಿಟ್ಟಿರುವುದರಿಂದ ಯಾವ ಸಂದರ್ಭದಲ್ಲಾದರು ಗೊಡೆ ಕುಸಿಯಬಹುದು ಎಂದು ಹೇಳುತ್ತಾರೆ. ಈ ಮನೆಗೆ ಒಂದೇ ಕಡೆ ಕಿಟಕಿ ಇರುವುದರಿಂದ ಗಾಳಿಯ ಸಂಚಾರ ಸರಿಯಾಗಿ ಆಗುವುದಿಲ್ಲ ಮತ್ತು ಒಳಗೆ ತುಂಬಾ ಶೆಖೆಯಿರುತ್ತದೆ ಎಂದು ಹೇಳುತ್ತಾರೆ.

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

**ಪಟ್ಟಿ 1: ವಸತಿ/ಮನೆ ಪಡೆದಿರುವ ಫಲಾನುಭವಿಗಳಿಗೆ ಕೇಳಲಾದ ಪ್ರಶ್ನೆಗಳಿಗೆ ನೀಡಿರುವ ಉತ್ತರದ ವಿವರ**

| | **ಹಾಡಿಗಳ ವಿವರ** | ಆಡಿನ ಕಣಿವೆ | | ಕಾರೇಮಾಳ | |
|---|---|---|---|---|---|
| | | ಹೌದು | ಇಲ್ಲ | ಹೌದು | ಇಲ್ಲ |
| 01 | ಸಿಸಿಡಿ ಯೋಜನೆಯಿಂದ ಉಪಯೋಗವಾಗಿದಿಯೇ? | 29% | 71% | 67% | 33% |
| 02 | ಈ ಯೋಜನೆಯಡಿ ನಿರ್ಮಿಸಿರುವ ಮನೆಯಿಂದ ಮಳೆ, ಗಾಳಿಯಿಂದ ರಕ್ಷಣೆ ದೊರೆಯುತ್ತದೆಯೆ? | 20% | 80% | 17% | 83% |
| 03 | ಮನೆಯಲ್ಲಿ ಗಾಳಿ ಮತ್ತು ಬೆಳಕು ಸರಿಯಾಗಿದೆಯೇ? | 38% | 62% | 17% | 83% |
| 04 | ಶೌಚಾಲಯ ಬಳಸುತ್ತಿದ್ದಿರಾ? | 18% | 82% | 23% | 87% |
| 05 | ಮನೆಯಲ್ಲಿರುವ ಅಡುಗೆ ಮನೆಯ ವಿಸ್ತೀರ್ಣ ನಿಮಗೆ ತೃಪ್ತಿಕಾರವಾಗಿದೆ? | 15% | 85% | 10% | 90% |

ಪಟ್ಟಿ 1ರಲ್ಲಿ ಸಿಸಿಡಿ ಯೋಜನೆಯಡಿ ನಿರ್ಮಿಸಿರುವ ಮನೆಯ ಗುಣಮಟ್ಟದ ಬಗೆಗಿನ ಮಾಹಿತಿಯ ವಿವರಣೆಯನ್ನು ನೀಡಲಾಗಿದೆ. ಎರಡು ಹಾಡಿಗಳಲ್ಲೂ ಬಹುತೇಕ ಫಲಾನಿಭವಿಗಳು ಅತೃಪ್ತಿಕರ ಭಾವನೆ ಹೊಂದಿರುವುದನ್ನು ಮೇಲಿನ ಪಟ್ಟಿಯಿಂದ ಸ್ಪಷ್ಟೀಕರಿಸಿ ಕೊಳ್ಳಬಹುದಾಗಿದೆ.

**ಪಟ್ಟಿ 2: ಕುರಿಗಳನ್ನು ಪಡೆದಿರುವ ಫಲಾನುಭವಿಗಳಿಗೆ ಕೇಳಲಾದ ಪ್ರಶ್ನೆಗಳಿಗೆ ನೀಡಿರುವ ಉತ್ತರದ ವಿವರ.**

| | ವಿವರಗಳು | ಆಡಿನ ಕಣಿವೆ | | ಕಾರೇಮಾಳ | |
|---|---|---|---|---|---|
| | | ಹೌದು | ಇಲ್ಲ | ಹೌದು | ಇಲ್ಲ |
| 01 | ಸಿಸಿಡಿ ಯೋಜನೆಯಡಿ ನೀಡಿರುವ ಕುರಿಯಿಂದ ನಿಮಗೆ ಉಪಯೋಗವಾಗಿದಿಯೇ? | 83% | 17% | 67% | 33% |
| 02 | ಸಿಸಿಡಿ ಯೊಜನೆಯಲ್ಲಿ ನೀಡಿದ ಕುರಿಮರಿಗಳು ಆರೋಗ್ಯವಾಗಿದ್ದವೆ ? | 83% | 17% | 67% | 33% |
| 03 | ಕುರಿಮರಿಯನ್ನು ಸಾಕಲು ನಿಮಗೆ ಕೊಟ್ಟಿಗೆ ವ್ಯವಸ್ಥೆ ಇದೆಯೇ? | 42% | 58% | 0% | 100% |
| 04 | ಕುರಿ ಸಾಕಾಣಿಕೆಯಿಂದ ನಿಮ್ಮ ಆರ್ಥಿಕ ಅಭಿವೃದ್ಧಿಯಾಗಿದೆಯೇ? | 83% | 17% | 25% | 75% |
| 05 | ಕುರಿ ನೀಡಿದ ನಂತರ ರೋಗ ಬಂದು ಕುರಿಗಳು ಸತ್ತಿದೆಯೇ? | 17% | 83% | 83% | 17% |

ಪಟ್ಟಿ 2 ರಲ್ಲಿ ಸಿಸಿಡಿ ಯೋಜನೆಯಡಿ ಕುರಿಗಳನ್ನು ಪಡೆದಿರುವ ಫಲಾನುಭವಿಗಳ ಪ್ರತಿಕ್ರಿಯೆಯನ್ನು ವಿವರಿಸಲಾಗಿದೆ. ಬಹುತೇಕ ಮಂದಿ ಕುರಿಯಿಂದ ಉಪಯೋಗವಾಗಿದೆ ಎಂದು ಹಾಗೂ ಅವುಗಳಿಂದ ಆರ್ಥಿಕ ಜೀವನ ಸುಧಾರಣೆಯಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಕಾರೇಮಾಳ ಹಾಡಿಯ ಫಲಾನುಭವಿಗಳು ಅವುಗಳಿಂದ ಆರ್ಥಿಕವಾಗಿ ಯಾವುದೇ ಸುಧಾರಣೆಯಾಗಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

**ಸಾರಾಂಶ ಮತ್ತು ಉಪಸಂಹಾರ**

ಹಿಂದಿನ ಕಾಲದಲ್ಲಿ ಬುಡಕಟ್ಟು ಜನರು ಸ್ಥಳೀಯವಾಗಿ ದೊರೆಯುವ ನೈಸರ್ಗಿಕ ವಸ್ತುಗಳನ್ನು ಬಳಸಿ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಅವರು ನಿರ್ಮಿಸಿಕೊಳ್ಳುತ್ತಿದ್ದ ಮನೆ ಎಲ್ಲಾ ಋತುಮಾನಗಳಿಗೂ ಹೊಂದಾಣಿಕೆಯಾಗುತ್ತಿತ್ತು. ಆದರೆ ಸಿಸಿಡಿ ಯೋಜನೆಯಡಿ ನಿರ್ಮಿಸಿಕೊಟ್ಟಿರುವ ಮನೆಯ ಮೇಲ್ಛಾವಣಿಗೆ ತಗಡುಗಳನ್ನು ಬಳಸಿರುವುದ್ದರಿಂದ ಬೇಸಿಗೆಯಲ್ಲಿ ಕಡು ಶಾಖದಿಂದಲೂ, ಮಳೆಗಾಲದಲ್ಲಿ ಹನಿಗಳ ಜೋರಾದ ಶಬ್ದ ಮತ್ತು ಗುಣಮಟ್ಟದ  ಕೊರತೆಯಿಂದ ಸೋರುವುದ್ದರಿಂದಲೂ ಯಾವುದೇ ಪ್ರಯೋಜನಕ್ಕೆ ಬಂದಂತೆ ಕಾಣುತ್ತಿಲ್ಲ. ಮನೆಯ ಗೋಡೆಗೆ ನಿರ್ಮಿಸಿರುವ ಇಟ್ಟಿಗೆ ಮತ್ತೀತರ ವಸ್ತುಗಳು ಕಳಪೆ ಗುಣಮಟ್ಟದಿಂದ ಕೂಡಿಲ್ಲದಿರುವುದ್ದರಿಂದ ಈಗಾಗಲೇ ಗೋಡೆಗಳು ಬಿರುಕು ಬಿಟ್ಟಿದೆ. ಅಡಿಪಾಯ ಸಾಕಷ್ಟು ಎತ್ತರದಲ್ಲಿಲ್ಲದ ಕಾರಣ ಮಳೆ ಬಂದರೆ ರಸ್ತೆಯಿಂದ ನೀರು ನೇರಾಗಿ ಮನೆಗೆ ನುಗ್ಗುತ್ತದೆ. ವಿಸ್ತೀರ್ಣದ ವಿಚಾರಕ್ಕೆ ಬಂದರೆ ಅತ್ಯಂತ ತುಂಬಾ ಚಿಕ್ಕದಾಗಿದ್ದು, ಗಾಳಿ ಬೆಳಕಿನ ಕೊರತೆಯಿದೆ. ಇಂತಹ ಸಂದಿಗ್ಧತೆಯಲ್ಲಿ ಈ ಮನೆಯಲ್ಲಿ ವಾಸಿಸುವುದಕ್ಕಿಂತ ಗುಡಿಸಲು ವಾಸವೇ ಉತ್ತಮವೆಂದು ಪಕ್ಕದಲ್ಲೇ ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿರುವುದನ್ನು ಅಧ್ಯಯನದ ಸಂಧರ್ಭದಲ್ಲಿ ಗುರುತಿಸಲಾಗಿದೆ.

ಇನ್ನೂ ಸಿಸಿಡಿ ಯೋಜನೆಯಿಂದ ನೀಡಿರುವ ಕುರಿಗಳಿಂದ ಅವರ ಜೀವನ ಸುಧಾರಿಸಿದೆ ಎಂಬುದಾಗಿ ಆಡಿನ ಕಣಿವೆಯ ಹಾಡಿಯ ಫಲಾನುಭವಿಗಳು ಹೇಳಿದ್ದರೂ ಕೂಡ ಬಹುತೇಕ ಫಲಾನುಭವಿಗಳು ತಮ್ಮಲ್ಲಿ ಕುರಿಗಳನ್ನು ಉಳಿಸಿಕೊಂಡಿಲ್ಲ. ಬದಲಿಗೆ ಮಾರಿ ಬಿಟ್ಟಿದ್ದಾರೆ. ಏಕೆಂದರೆ ಸರ್ಕಾರದಿಂದ ಕುರಿಗಳನ್ನು ನೀಡುವಾಗ ಆರೋಗ್ಯ ಕುರಿಗಳಂತೆ ಕಂಡರೂ ಕೂಡ ಅವು ಸ್ಥಳೀಯ ಭೌಗೋಳಿಕ ಪರಿಸರಕ್ಕೆ ಹೊಂದಿಕೊಳ್ಳದೆ ಅನಾರೋಗ್ಯಕ್ಕೊಳಗಾಗಿ ಮೃತಪಟ್ಟಿರುವ ಉದಾಹರಣೆಗಳಿಂದ ಇತರರು ಆ ಭಯದಿಂದ ಮಾರಾಟ ಮಾಡಿರುವುದು ಕಂಡು ಬಂದಿದೆ. ಆದರೆ ಶೇ.30ಕ್ಕೂ ಅಧಿಕ ಮಂದಿ ಕೊಟ್ಟಿರುವ ಕುರಿಗಳನ್ನು ಜತನದಿಂದ ಕಾಪಾಡಿಕೊಂಡು ಜೀವನೋಪಾಯಕ್ಕೆ ಬಳಸಿಕೊಳ್ಳುತ್ತಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಸರ್ಕಾರದ ಮಹತ್ವಕಾಂಕ್ಷೆ ಯೋಜನೆಯಾದ ಸಿಸಿಡಿಯ ಉದ್ದೇಶ ನಿರೀಕ್ಷಿತ ಮಟ್ಟದಲ್ಲಿ ತಲುಪದಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದ್ದು, ಈ ಯೋಜನೆ ಇದೇ ರೀತಿ ಅನುಷ್ಠಾನಗೊಂಡರೆ ಸಂಪೂರ್ಣವಾಗಿ ಸಫಲವಾಗುವುದಿಲ್ಲ. ಆದ್ದರಿಂದ ಸಿಸಿಡಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಬುಡಕಟ್ಟು ಮುಖಂಡರು, ಸದಸ್ಯರು, ಮಾನವಶಾಸ್ತ್ರಜ್ಞರು, ಅಧಿಕಾರಿಗಳು ಒಂದೆಡೆ ಚರ್ಚಿಸಿ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಿದರೆ ಅನುಕೂಲವಾಗುತ್ತದೆ.

**ಪರಾಮರ್ಶನಾ ಗ್ರಂಥಗಳು**


- ಕೃಷ್ಣ ಅಯ್ಯಂಗಾರ್. ಡಿ. (1956). ಕನ್ನಡ ನಾಡಿನ ಆದಿವಾಸಿಗಳು. (ಮೈಸೂರು ರಾಜ್ಯ). ವಾರ್ತೆ ಇಲಾಖೆ, ಮೈಸೂರು ಸರ್ಕಾರ ಬೆಂಗಳೂರು, 1956. ಪು.ಸಂ. 497
- ಮಂಜುನಾಥ ಬಿ.ಆರ್ (2019), ಜೇನುಕುರುಬರ ಜೀವನ ಮತ್ತು ಸಂಸ್ಕೃತಿ, ಪ್ರತಿಬಿಂಬ: ಮಲ್ಟಿಡಿಸ್ಪಿಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, ಸಂ 1(1), 74–79
- ಪಳನಿಸ್ವಾಮಿ. (2011). ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ. ಸ್ಕಂದಶ್ರೀ ಪ್ರಕಾಶನ. ಗುಂಡ್ಲುಪೇಟೆ.
- ಪಾರ್ವತಮ್ಮ. ಸಿ (ಸಂ). (2007). ಆದಿವಾಸಿಗಳ ಸಮುದಾಯಗಳ ಅಭಿವೃದ್ಧಿ. ಪ್ರಸಾರಂಗ. ಕನ್ನಡ.ವಿ.ವಿ. ಹಂಪಿ
- ಜಿಲ್ಲಾ ಅಂಕಿ ಅಂಶಗಳ ವರದಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಚಾಮರಾಜನಗರ


IIMRD JOURNALS